OS. NO.243/2009
PW.1

ದಿನಾಂಕಃ 12.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ- ವಾದಿಗಳ ಪರ ವಕೀಲರಾದ ಶ್ರೀ. ಆರ್ ಸಿ ರವರಿಂದಃ

ವಾದಿಯಾದ ನಿಂಗಮ್ಮ ನನ್ನ ತಾಯಿ. ನನಗೆ ಈ ದಾವೆಯಲ್ಲಿ ವಾದಿಯು ವಿಶೇಷ ಅಧಿಕಾರ ಪತ್ರ ಬರೆದುಕೊಟ್ಟಿದ್ದು, ನಾನು ವಾದಿಯ ಪರವಾಗಿ ಸಾಕ್ಷ್ಯ ನುಡಿಯಲು ಬಂದಿದ್ದು, ನನ್ನ ಮುಖ್ಯ ವಿಚಾರಣೆಯ ಬದಲಾಗಿ ನಾನು ನನ್ನ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳನ್ನು ನಾನು ನನ್ನ ವಕೀಲರಿಗೆ ಹೇಳಿ, ಬರೆಯಿಸಿ, ಓದಿಸಿ ತಿಳಿದುಕೊಂಡು ಮನಗೊಂಡ ನಂತರ ಸಹಿ ಮಾಡಿರುತ್ತೇನೆ. ನನ್ನ ಪ್ರಮಾಣಪತ್ರದಲ್ಲಿರುವ ಎಲ್ಲಾ ವಿಷಯಗಳು ನಿಜ ಮತ್ತು ಸತ್ಯಸಂಗತಿಗಳಾಗಿರುತ್ತವೆ.

ವಾದಿ ನನಗೆ ಬರೆದುಕೊಟ್ಟ ವಿಶೇಷ ಅಧಿಕಾರ ಪತ್ರವನ್ನು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ಸರ್ವೆ ನಂ. 22/3 ಬಿ ಜಮೀನಿಗೆ ಸಂಬಂಧಿಸಿದಂತೆ 2007-2008 ನೇ ಸಾಲಿನ ಒಂದು ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿರುತ್ತೇನೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ಪ್ರತಿವಾದಿಗಳಿಗೆ ನೀಡಿದ ನೋಟೀಸಿನ ಕಚೇರಿ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ನಿಪಿ-3 ಕ್ಕೆ ಸಂಬಂಧಿಸಿದಂತೆ 08 ಅಂಚೆ ರಶೀದಿಗಳನ್ನು, 08 ವಾಪಸ್ಸಾದ ಅಂಚೆ ಲಕೋಟೆಗಳನ್ನು ಹಾಜರು ಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-4 ರಿಂದ ನಿಪಿ-19 ಎಂದು ಗುರುತಿಸಲಾಯಿತು.

OS. NO.243/2009
PW.1

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿದ್ದು ಆಲಿಸಿ ನೀಡಲಾಯಿತು**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

(ರಾಧಾ ಎಸ್.)
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ.